

# ಕೈತೋಟದ ಮೋಹನಾಂಗಿ ಮುಸ್ಸೆಂಡಾ

■ ಪ. ರಾಮಕೃಷ್ಣ ಶಾಸ್ತ್ರಿ

ಮುಸ್ಸೆಂಡಾ ಅಂಗಳದಲ್ಲಿದ್ದರೆ ಇಡೀ ಆವರಣಕ್ಕೇ ಓಕುಳಿ ಚೆಲ್ಲಿದಂತೆ. ಒಂದೊಂದು ತೊಟ್ಟಿನಲ್ಲೂ ರಾಶಿ ಹಾಕಿದಂತೆ ಕಾಣಿಸುವ ಹೂಗಳ ಗುಚ್ಛ ಹಸುರು ಎಲೆಗಳನ್ನು ಮರೆಸಿ ಕಣ್ಣುಗಳಿಗೂ ರಂಗು ಆವರಿಸುವಂತೆ ಮಾಡುತ್ತದೆ.

ಫಿಲಿಪ್ಪೀನ್ಸ್ ದೇಶದ ಕಾಡುಗಳಿಂದ ಭಾರತಕ್ಕೆ ಬಂದ ಈ ಕಾಡು ಗಿಡ ಇಂದು ನಮ್ಮ ಮಣ್ಣಿನ ಅಪ್ಪಟ ಸಸ್ಯವೆಂಬಂತೆ ಮನೆಯಂಗಳದಲ್ಲಿ, ಉದ್ಯಾನಗಳಲ್ಲಿ ಬೆಳೆದು ಚೆಲುವಾದ ಹೂಗೊಂಚಲುಗಳಿಂದ ಆಕರ್ಷಿಸುತ್ತಿದೆ. ಇದರಲ್ಲಿ ಹಲವಾರು ಬಣ್ಣಗಳಿದ್ದರೂ ವ್ಯಾಪಕವಾಗಿ ಕಂಡುಬರುವುದು ತಿಳಿ ಗುಲಾಬಿ ಬಣ್ಣದ ಹೂಗಳ ಗಿಡ. ಅಪರೂಪವಾಗಿ ಬಿಳಿ, ಗಾಢ ಗುಲಾಬಿ, ಅಚ್ಚ ಕೆಂಪಿನ ಬಣ್ಣದ ಹೂ ಬಿಡುವ ಜಾತಿಗಳನ್ನೂ ಕಾಣಬಹುದು.



ಹೂಗಳ ಪೊದೆಯ ಹಾಗೆ ಇರುವ ಮುಸ್ಸೆಂಡಾ ನಿತ್ಯ ಹರಿದ್ವರ್ಣದ ಗಿಡ. ಇದರ ವೈಜ್ಞಾನಿಕ ಹೆಸರು ಮುಸ್ಸೆಂಡಾ ಫಿಲಿಪ್ಪಿಕಾ. ರೂಬಿಯೇಸಿ ಕುಟುಂಬದ ಸದಸ್ಯ. ಫಿಲಿಪ್ಪೀನ್ಸ್ ದೇಶದ ಮಾಜಿ ಅಧ್ಯಕ್ಷ ಮ್ಯಾನ್ಯುವೆಲ್ ಎಲ್. ಕ್ವಿಜಾನ್ ಅವರ ಪತ್ನಿ ಈ ಹೂ ಗಿಡದ ತಳಿ ಸಂರಕ್ಷಣೆಗೆ ವಹಿಸಿದ ಕಾಳಜಿಯ ಕಾರಣದಿಂದ ಗಿಡಕ್ಕೆ ಅವರ ಹೆಸರನ್ನೇ ಇಡಲಾಗಿದೆ. ಸಮಶೀತೋಷ್ಣ ಹವೆಯನ್ನು ಇಷ್ಟಪಡುವ ಈ ಸಸ್ಯ, ಭಾರತದ ಹಲವು ಕಡೆಗಳಲ್ಲಿಯೂ ಬೆಳೆಯುತ್ತದೆ.

ಮುಸ್ಸೆಂಡಾ ಹೂವಿಗೆ ಸುಗಂಧವಿಲ್ಲದಿದ್ದರೂ ಬಣ್ಣದ ಮುದ್ದೆಯಂತೆ ರಂಗೇರಿಸುತ್ತ ಲಾವಣ್ಯದಿಂದ ಮೆರೆಯುತ್ತದೆ. ನೀಳವಾಗಿರುವ ಐದು ಎಸಳುಗಳನ್ನು ಜೋಡಿಸಿ ಮಧ್ಯೆ ಹಳದಿ ವರ್ಣದ ನಕ್ಷತ್ರ ಹೊಂದಿರುವ ಹತ್ತಾರು ಹೂವುಗಳು ಒಂದೊಂದು ಗೊಂಚಲಿನಲ್ಲಿರುತ್ತವೆ.

ಎರಡು ಮೀಟರ್ ಎತ್ತರದವರೆಗೂ ಬೆಳೆಯುವ ಮುಸ್ಸೆಂಡಾ ಗಿಡದಲ್ಲಿ ಹಲವು ಶಾಖೆಗಳಿವೆ. ಗಿಡ ಹತ್ತಾರು ವರ್ಷ ಬದುಕುತ್ತದೆ. ಈ ಗಿಡದ ಹೂವು, ಎಲೆ, ತೊಗಟೆಗಳು ಔಷಧೋಪಯುಕ್ತವಾಗಿದ್ದು ಆಸ್ಪಿರಿನ್, ಸ್ಟೀರಾಯ್ಡ್, ಫ್ಲೇವನಾಯ್ಡ್, ಗ್ಲೈಕೋಸೈಡ್ ತಯಾರಿಕೆಗೆ ಬೇಕಾದ ಸಾರವನ್ನು ಅದರಿಂದ ಪಡೆಯಲಾಗುತ್ತದೆ. ಕಾಮಾಲೆ, ಭೇದಿ, ಹೊಟ್ಟೆನೋವು, ಇನ್‌ಫ್ಲುಯೆಂಜಾಗಳಿಗೆ ಇದರ ಅಂಗಗಳಿಂದ ಚಿಕಿತ್ಸೆ ಮಾಡಲಾಗುತ್ತದೆ. ■


**ನಿಮ್ಮ ಕನಸಿನ ಮನೆ ಸದೃಢ ಹಾಗೂ ದೀರ್ಘ ಬಾಳಿಕೆ ಬರಲು, ಕಟ್ಟಡಕ್ಕೆ ಬಳಸಿ**

**ಮೌಂಟೋ ಬ್ರಿಕ್ಸ್**



ನಮ್ಮಲ್ಲಿ 9X4X3 ಮತ್ತು 9X6X6 wire cut red bricks ದೊರೆಯುತ್ತವೆ. ನಮ್ಮ ಇಟ್ಟಿಗೆ ಬಳಸಿದರೆ ಪ್ಲಾಸ್ಟರ್‌ನ ಅವಶ್ಯಕತೆ ಇಲ್ಲದಿರುವುದರಿಂದ ಸಾಕಷ್ಟು ಮರಳು ಮತ್ತು ಸಿಮೆಂಟ್ ಉಳಿಯುತ್ತದೆ. ನಮ್ಮ ಇಟ್ಟಿಗೆ Wire Cut ಹಾಗೂ Kiln Tech. ನಲ್ಲಿ 900 ಡಿಗ್ರಿವರೆಗೆ ಸುಡುವುದರಿಂದ ಪ್ರತಿಯೊಂದು ಇಟ್ಟಿಗೆ ಸಂಪೂರ್ಣವಾಗಿ ಸುಟ್ಟಿರುತ್ತದೆ. ಅಕಸ್ಮಾತಾಗಿ ನಿರೀಕ್ಷೆಗೂ ಮೀರಿ ಮಳೆ ಬಂದು ನಿಮ್ಮ ಮನೆ 10 ರಿಂದ 15 ದಿನಗಳ ವರೆಗೆ ನೀರಲ್ಲಿದ್ದರು ನಮ್ಮ ಇಟ್ಟಿಗೆ ಕರಗುವುದಿಲ್ಲ, ಇದರಿಂದ ನಿಮ್ಮ ಮನೆಗೆ ಯಾವುದೇ ಹಾನಿಯಾಗುವುದಿಲ್ಲ. ನೀವು ಬೇಕಾದರೆ ಇಟ್ಟಿಗೆ ತರಿಸಿ Bucket ನಲ್ಲಿ ಇಟ್ಟು ಪರೀಕ್ಷೆ ಮಾಡಿ ನೋಡಿ. ಈಗಾಗಲೇ ನಮ್ಮ ಇಟ್ಟಿಗೆಗಳನ್ನು ಬಳಸಿ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ 500ಕ್ಕೂ ಹೆಚ್ಚು ಮನೆಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ನೀವು ಯಾವ ಸ್ಥಳದಲ್ಲಿ ಮನೆ ಕಟ್ಟಲು ಬಯಸುವಿರೋ ಆ ಸ್ಥಳಗಳಲ್ಲಿ ಈಗಾಗಲೇ ನಮ್ಮ ಇಟ್ಟಿಗೆ ಬಳಸಿ ಮನೆ ಕಟ್ಟಿಸಿರುವವರ Phone Number ಕೊಡಲಾಗುವುದು. ನಿಮಗೆ ಇಟ್ಟಿಗೆ Sample ಬೇಕಾದಲ್ಲಿ Parcel ಮುಖಾಂತರ ಕಳುಹಿಸುತ್ತೇವೆ.

MOUNTO Bricks Pvt Ltd

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

**ಮೌಂಟೋ ಬ್ರಿಕ್ಸ್ ಪ್ರೈವೇಟ್ ಲಿಮಿಟೆಡ್**

ವಿಳಾಸ: ನಂ.11/1, ಜಿಂದಾಲ್ ಹತ್ತಿರ, ಬನ್ನಿಹಟ್ಟಿ, ತಾರಾನಗರ, ಸಂಡೂರು (ತಾ), ಬಳ್ಳಾರಿ (ಜಿ), ಕರ್ನಾಟಕ–583119.

ಸಂಪರ್ಕಿಸಿ: **7022000804, 7892943478**